ಸುಮಾರು ೪೦೦ ವರ್ಷಗಳ ಹಿಂದೆ ಅವತರಿಸಿದ ಶ್ರೀಚೈತನ್ಯದೇವನು ಸಾಧಾರಣ ಮನುಷ್ಯರ ನಡುವೆ, ಭಗವಂತನಲ್ಲಿ ಪ್ರೇಮಭಕ್ತಿ ಮತ್ತು ಸರ್ವಸಮತ್ವ ಭಾವನೆಗಳ ಪ್ರಚಾರ ಮಾಡಿದನು. ಚೈತನ್ಯದೇವನ ತ್ಯಾಗ, ವೈರಾಗ್ಯ ಮತ್ತು ಭಗವತ್ ಪ್ರೇಮಗಳಿಂದ ಆಕರ್ಷಿತರಾಗಿ, ಅವನ ಹರಿನಾಮ ಸಂಕೀರ್ತನೆಯ ನಾದಕ್ಕೆ ಸಮಾಜದ ಎಲ್ಲಾ ಸ್ತರಗಳ ಜನರೂ ತಮ್ಮ ದನಿಯನ್ನು ಸೇರಿಸಿದರು; ಉನ್ನತ ಆಧ್ಯಾತ್ಮಿಕ ಭಾವದಲ್ಲಿ ಮತ್ತರಾಗಿ ನರ್ತಿಸಿದರು.

ಗಿರೀಶನ ಕಾಲದಲ್ಲಿ, ಅಂದರೆ ೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಮೂರ್ತಿ ಪೂಜೆಯ ವಿರೋಧ, ಭಾರತೀಯವಾದುದೆಲ್ಲದರ ಬಗ್ಗೆ ತಿರಸ್ಕಾರ ಒಂದೆಡೆ ಇದ್ದರೆ, ಇನ್ನೊಂದೆಡೆ ಹಿಂದೂ ಧರ್ಮದ ಪ್ರಚಾರಕರಾದ ಪಂಡಿತ ಶಶಧರ ತರ್ಕಚೂಡಾಮಣಿ ಮುಂತಾದವರು ಧಾರ್ಮಿಕ ಆಂದೋಲನವೊಂದನ್ನು ಆರಂಭಿಸಿದ್ದರು. ಕೇಶವಚಂದ್ರ ಸೇನ್, ಪಂಡಿತ ಶಿವನಾಥ ಶಾಸ್ತ್ರಿ ಮೊದಲಾದ ಬ್ರಾಹ್ಮ ಪ್ರಚಾರಕರು ಹಾಗೂ ಬಂಕಿಮಚಂದ್ರರಂಥ ಸಾಹಿತಿಗಳು ತರುಣರ ಮನಸ್ಸಿನಲ್ಲಿ ಹೊಸದಾಗಿ ಧರ್ಮಭಾವನೆಯನ್ನು ತರುವ ಪ್ರಯತ್ನ ಮಾಡುತ್ತಿದ್ದರು.

ಇಂಥ ಒಂದು ಸಂದಿಗ್ಧ ಸಮಯದಲ್ಲಿಯೇ ಗಿರೀಶ್ ಘೋಷ್ **ಚೈತನ್ಯಲೀಲಾ** ನಾಟಕವನ್ನು ರಚಿಸಿ, ರಂಗಕ್ಕೆ ತಂದನು. ಆದರೆ ಯಾವುದೇ ಧಾರ್ಮಿಕ ಭಾವನೆಯನ್ನು ಪ್ರಚೋದಿಸುವುದು ಅವನ ಉದ್ದೇಶವಾಗಿರಲಿಲ್ಲ. ಈ ನಾಟಕವನ್ನು ಅತ್ಯಂತ ಕಡಮೆ ಖರ್ಚಿನಲ್ಲಿ ನಡೆಸಬಹುದಾಗಿತ್ತು. ಕೆಲವು ಕಾವಿ ಬಟ್ಟೆಗಳು, ರುದ್ರಾಕ್ಷಿ ಮಾಲೆಗಳು ಮಾತ್ರ ಇದಕ್ಕೆ ಬೇಕಾದ ಅಲಂಕಾರದ ಪರಿಕರಗಳು. ಆದರೆ ಹೊಸ ಹೊಸ ಭಾವ ಹಾಗೂ ವಸ್ತುಗಳಿಂದ ಕೂಡಿದ ನಾಟಕಗಳನ್ನು ರಂಗಮಂಟಪಕ್ಕೆ ತರಲು ಗಿರೀಶ್ ಒಂದೇ ಸಮನೆ ಒಂದಾದ ಮೇಲೆ ಒಂದರಂತೆ ನಾಟಕಗಳನ್ನು ರಚಿಸುತ್ತಿದ್ದನು. **ಚೈತನ್ಯಲೀಲಾ** ಕೂಡ ಇವುಗಳಲ್ಲಿ ಒಂದು. ಈ ನಾಟಕ ತನ್ನ ಜೀವನದಲ್ಲಿ ಒಂದು ಗುರುತರವಾದ ಬದಲಾವಣೆಯನ್ನು ತರುವುದು ಮಾತ್ರವಲ್ಲ, ಇಡಿಯ ನಾಟಕರಂಗವನ್ನೇ ಒಂದು ಗೌರವಯುತ ಸ್ಥಾನಕ್ಕೆ ಏರಿಸುತ್ತದೆಂಬ ಯಾವ ಸುಳಿವೂ ಆರಂಭದಲ್ಲಿ ಗಿರೀಶನಿಗೆ ಸಿಕ್ಕಿರಲಿಲ್ಲ. ನಾಟಕದ ಹಾಡುಗಳು ಹಾಗೂ ನೃತ್ಯದ ಮಾರ್ಗದರ್ಶನಕ್ಕೆ ಗಿರೀಶ್ ಆ ಕಾಲದ ಪ್ರಸಿದ್ಧ ಗಾಯಕ ವೇಣೀಮಾಧವ ಅಧಿಕಾರಿಯ ಸಹಾಯ ಪಡೆದಿದ್ದನು. ಈತ ನರೇಂದ್ರನಾಥನ (ಮುಂದೆ ಸ್ವಾಮಿ ವಿವೇಕಾನಂದ) ಸಂಗೀತ ಶಿಕ್ಷಕನಾಗಿದ್ದನು.

ಈ ನಾಟಕ, ಸಮಾಜದಲ್ಲಿ ತೀವ್ರ ನಿಂದೆಗೂ ಒಳಗಾಗಿತ್ತು. ಇದಕ್ಕೆ ಅಂದಿನ ಪ್ರಸಿದ್ಧ ನಾಟಕಕಾರ ಅಮೃತಲಾಲ ಬಸುವಿನ ಮಾತಿನಲ್ಲಿ ಹೇಳುವುದಾದರೆ, **"ವ್ಯಭಿಚಾರಿಗಳಾದ ನಟನಟಿಯರಿಂದ ಧರ್ಮಪ್ರಚಾರವೆ?!"** ಎಂಬ ಅಸಡ್ಡೆಯ ಭಾವವೇ ಕಾರಣವಾಗಿತ್ತು. **'ಇಂಗ್ಲಿಷ್‌ಮ್ಯಾನ್'** ನಂಥ ಪಾಶ್ಚಾತ್ಯ ಭಾವವುಳ್ಳ ಪತ್ರಿಕೆಯೂ, **"ಅಂಗಡಿ ಬೀದಿಯಲ್ಲಿ ಅಲೆಯುವ ನೀಚಸ್ತರದ ನಟಿಯರಿಂದ ಧರ್ಮಪ್ರಚಾರ ನಡೆಯುತ್ತಿದೆ"** ಎಂದು ಟೀಕೆ ಮಾಡಿತು. ಇಷ್ಟೆಲ್ಲಾ ಟೀಕೆ ಟಿಪ್ಪಣಿಗಳ ನಡುವೆಯೂ ಈ ನಾಟಕ ಅತ್ಯಂತ ಜನಪ್ರಿಯವಾಯಿತು.

ಸಾಧಕ ವಿಜಯಕೃಷ್ಣ ಗೋಸ್ವಾಮಿ ಈ ನಾಟಕದ 'ಕೇಶವ ಕುರು ಕರುಣಾ ದೀನೆ' ಎಂಬ ಹಾಡನ್ನು ಕೇಳಿ ತನ್ನ ಇರವನ್ನೇ ಮರೆತು ಸ್ಟಾರ್‌ಥಿಯೇಟರಿನಲ್ಲಿ ನರ್ತಿಸಲಾರಂಭಿಸಿದನು. ನವದ್ವೀಪದ ಹೆಸರುವಾಸಿಯಾದ ಪಂಡಿತ ವಿದ್ಯಾಭೂಷಣನು **ಚೈತನ್ಯಲೀಲಾ** ನಾಟಕದ ಆಮಂತ್ರಣಪತ್ರವನ್ನು ಪಡೆದನು. ನಟನಟಿಯರ ಸ್ವಭಾವಚಾರಿತ್ರ್ಯಗಳ ಬಗ್ಗೆ ಒಳ್ಳೆಯ ಭಾವನೆ ಇಲ್ಲದ್ದರಿಂದ ನಾಟಕಾಲಯದೊಳಗೆ ಪ್ರವೇಶಿಸುವ ವಿಚಾರ ಎಂದೂ ಆ ಪಂಡಿತನಿಗೆ ಉಂಟಾಗಿರಲಿಲ್ಲ. ಆದರೂ **ಚೈತನ್ಯಲೀಲಾ** ನಾಟಕದ ಕೀರ್ತಿಯನ್ನು ಕೇಳಿ, ಬಹುವಾಗಿ ಚಿಂತಿಸಿ, ಕಡೆಗೆ ತನ್ನ ಮಗ ಮಥುರನಾಥ ಪದರತ್ನನನ್ನು ಕಳುಹಿಸಿದನು. ಈತನೂ ತಂದೆಯಂತೆ ನಿಷ್ಠಾವಂತ ವೈಷ್ಣವ ಪಂಡಿತ. ನಟಿ ವಿನೋದಿನಿಯು ಚೈತನ್ಯದೇವನ ಪಾತ್ರದಲ್ಲಿ ಮಾಡಿದ ಅದ್ಭುತ ಅಭಿನಯವನ್ನು ಕಂಡು ಹಾಗೂ ಭಕ್ತಿ ಭಾವೋದ್ದೀಪಕ ಹಾಡುಗಳನ್ನು ಕೇಳಿ ಮುಗ್ಧನಾದ ಮಥುರನಾಥ ನಾಟಕ ಮುಗಿದ ಮೇಲೆ ಗಿರೀಶ್ ಘೋಷನ ಬಳಿ ಹೋಗಿ, ತನಗಿಂತ ಹಿರಿಯನಾದ ಆತನ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸಲು ಮುಂದಾದನು. ಗಿರೀಶ್ ಕೂಡಲೇ ಆತನನ್ನು ತಡೆಯಲು, ಆ ವೈಷ್ಣವ ಪಂಡಿತ ಹೃತ್ಪೂರ್ವಕವಾಗಿ ಗಿರೀಶನಿಗೆ ಹೀಗೆ ಹಾರೈಸಿದನು: **"ಜೀವನದಲ್ಲಿ ನೀವು ಬಯಸಿದ್ದನ್ನು ಚೈತನ್ಯದೇವ ಸಫಲವಾಗುವಂತೆ ಮಾಡುತ್ತಾನೆ."** (*ಮುಂದುವರಿಯುವುದು*)

---

**ಚಿಂತನಪ್ರಭ**

ಅಹಿಂಸೆಯ ವ್ಯಾಪ್ತಿ

ಹಿಂಸೆ ಮತ್ತು ಹೇಡಿತನ – ಇವೆರಡರ ಪೈಕಿ ನಾನು ಹಿಂಸೆಯನ್ನೇ ಒಪ್ಪುತ್ತೇನೆ... ಅಪಾಯದ ಮುಖದಿಂದ ಪರಾರಿಯಾಗುವುದು ಶುದ್ಧ ಹೇಡಿತನ... ಆದರೆ ಅಹಿಂಸೆ ಹಿಂಸೆಗಿಂತ ಸಾವಿರಪಾಲು ಮೇಲಾದುದು. ಕ್ಷಮಿಸುವುದು ಶಿಕ್ಷಿಸುವುದಕ್ಕಿಂತ ಉತ್ತಮವಾದುದು ಎಂದು ನನಗೆ ಗೊತ್ತು. ಶಿಕ್ಷಿಸಲು ಶಕ್ತಿಯಿರುವಾಗ ಮಾತ್ರ ಶಿಕ್ಷಿಸದಿರುವುದು ಕ್ಷಮೆ... ಶಕ್ತಿ, ಬರಿಯ ದೇಹದ ಪಶುಶಕ್ತಿಯಲ್ಲಿ ಮಾತ್ರ ಇಲ್ಲ. ಬಗ್ಗಿಸಲು ಅಸಾಧ್ಯವಾದ ಮನಸ್ಥೈರ್ಯ, ಇಚ್ಛಾಶಕ್ತಿ – ಇವೇ ನಿಜವಾದ ಶಕ್ತಿ. ಆತ್ಮದ ಪೂರ್ಣಬಲದಿಂದ ದುಷ್ಟರ ಹಿಂಸೆಯನ್ನು ಎದುರಿಸುವುದೇ ಅಹಿಂಸೆ. ಒಬ್ಬನೇ ಒಬ್ಬ ಮನುಷ್ಯ, ಹೀಗೆ ಒಂದು ಚಕ್ರಾಧಿಪತ್ಯವನ್ನು ಎದುರಿಸಿ, ಅದನ್ನು ನಾಶಮಾಡಬಲ್ಲನು. ಈ ಅಹಿಂಸೆ ಬರಿಯ ಋಷಿಗಳಿಗೆ ಮಾತ್ರ ಸೇರಿದುದಲ್ಲ. ಇದನ್ನು ಸಾಮಾನ್ಯರೂ ಆಚರಿಸಬಹುದು. ಅಹಿಂಸೆ ಮನುಷ್ಯನ ಗುಣ. ಹಿಂಸೆ ಪಶುಗಳ ಲಕ್ಷಣ. ಪಶುಗಳ ಆತ್ಮ ನಿದ್ರಿಸುತ್ತಿದೆ. ಅದಕ್ಕೆ ದೇಹಶಕ್ತಿ ಹೊರತು ಮತ್ತಾವುದೂ ತಿಳಿದಿಲ್ಲ. ಆದರೆ ಮನುಷ್ಯನ ಘನತೆ, ಇದಕ್ಕಿಂತ ಮೇಲಿನ ಆತ್ಮದ ಶಕ್ತಿಗೆ ಅಧೀನವಾಗಿರುತ್ತದೆ. ಇದಕ್ಕೆ ಮುಖ್ಯವಾದುದು ತ್ಯಾಗ; ಆತ್ಮದ ಬಲಿದಾನ. ಅಹಿಂಸೆಯನ್ನು ಕಂಡುಹಿಡಿದ ಋಷಿಗಳು ವಿಜ್ಞಾನಿಗಳಿಗಿಂತ ದೊಡ್ಡವರಾಗಿದ್ದರು. ಅವರು ಜಗತ್ತಿಗೆ, "ಹಿಂಸೆಯಿಂದ ಮೋಕ್ಷವಿಲ್ಲ, ಅಹಿಂಸೆಯಿಂದ ಮಾತ್ರ ಮೋಕ್ಷ" ಎಂದು ಬೋಧಿಸಿದರು. ಅಂತಹ ಶಕ್ತಿಯ ಸಂರಕ್ಷಣೆಯಲ್ಲಿ ಮಾತ್ರ ನಾವು ಸುಖವಾಗಿ, ಸುವ್ಯವಸ್ಥಿತವಾಗಿ ಜೀವಿಸಬಹುದು.

**–ಮಹಾತ್ಮ ಗಾಂಧೀ** (ಆಧಾರ: ಭಾರತ ಭಾಗ್ಯವಿಧಾತ)